ಹೋಗಿಬಿಡ್ರಿ. ಅಲ್ಲೇ ಲಗ್ನ ಮಾಡಿಕೊಟ್ಟು ವಾಪಸ್ ಬನ್ನಿ' ಪ್ರಧಾನಿ ಸಲಹೆ ಕತ್ತಲಲ್ಲಿ ದಾರಿದೀಪದಂತೆ ಕಂಡಿತು.

ಸರಿರಾತ್ರಿಯಲ್ಲಿ ಮಾದ ಕನವರಿಸುವಾಗ ಹೆತ್ತವರಿಗೆ ಎಚ್ಚರ. ಮೈಮುಟ್ಟಿದರೆ ಕೆಂಡದಂಗಾಗೇತೆ. 'ಅವ್ವಾ, ಉಮೆ ಬತ್ತಾಳೇನವ್ವಾ?' ಬಡಬಡಿಸಹತ್ತಿದ್ದ. 'ಅವಳಿಲ್ದೆ ನಾನು ಬದುಕಂಗಿಲ್ಲವ್ವಾ' ಬುಳುಬುಳು ಅತ್ತ. ಅವರೂ ಜೊತೆಗೂಡಿ ಅತ್ತರು. ಬಡಾಮಕಾನ್ಗೆ ಕರೆದೊಯ್ದು ಮುಲ್ಲಾಸಾಬರ ಬಳಿ ನವಿಲುಗರಿಯಾಗೆ ನಿವಾಳಿ ತೆಗಿಸಿ, ಪಲಿತ ತೊಳ್ದು ಕುಡಿಸಿ ತಾಯತಕಟ್ಟಿದರು.

ಬೆಳ್ಳಂಬೆಳಿಗ್ಗೆಯೇ ಬಂಡಿಗಳಿಗೆ ಸಾಮಾನುಗಳನ್ನು ಹೇರಿಸಿದ ಬಸಯ್ಯ ಮಕ್ಕಳೊಂದಿಗೆ ಹೊಂಟೇಬಿಟ್ಟ. ಉಮೆ ಬಂಡಿ ಏರದೆ ಹೆಚ್ಚೇ ರಂಪಾಟ ಮಾಡುವಾಗ ದೊಡ್ಡಪೇಟೆ ಮಂದಿ ಅಂಗಳಕ್ಕೆ ಬಂದರು. ಅದೇ ತಾನೆ ಉತ್ಸವಾಂಬ ಆಲಯಕ್ಕೆ ದೇವಿ ಪೂಜೆಗೆಂದು ಬಂದಿದ್ದ ಮದಕರಿನಾಯಕರಿಗೂ ಗದ್ದಲ ಕೇಳಿತು. ವಿಚಾರಿಸಿದರು. ಬಸಯ್ಯನ ಮಗಳ ಪ್ರೇಮಪುರಾಣವನ್ನು ಪೂಜಾರಿ ಪಿಸುಗಿದ. 'ಆ ಹುಡುಗನಿಗೇ ಕೊಟ್ಟು ವಿವಾಹ ನೆರವೇರಿಸಬಹುದಿತ್ತಲ್ಲ ಪೂಜಾರ್ರೆ?' ನಾಯಕರ ಮೂಗಿನ ತುದಿ ಮೇಲೆದ್ದಿತು. 'ಹುಡುಗಂದು ಕೀಳುಜಾತಿ ಮಹಾಪ್ರಭು' ಪೂಜಾರಿ ಗೊಣಗಿದ. 'ಈ ದೇಶದಲ್ಲಿ ಜಾತಿ ಇದೆ ಒಪ್ಕೋತೀನಿ. ದುಡಿದು ತಿನ್ನೋನು ಮೇಲು. ದುಡಿದೇ ತಿನ್ನೋನು ಕೀಳು ಅಷ್ಟೆ ಕಣ್ರಿ. ಕಾಯಕವೇ ಕೈಲಾಸದ ಅರ್ಥ ಇಷ್ಟೆ.' ಪೂಜಾರಿ ತುಟಿಬಿಚ್ಚದೆ ಪೂಜಾಪ್ರಸಾದ ನೀಡಿ ದೊರೆಗಳಿಗೆ ವಂದಿಸಿದ. ಮದಕರಿನಾಯಕರು ಆಲಯದ ಮೆಟ್ಟಿಲುಗಳನ್ನಿಳಿದು ಬೀದಿಗೆ ಬರುವುದಕ್ಕೂ ಬಂಡಿಯಿಂದ ಧುಮುಕಿದ ಉಮೆ ಕೋಟೆ ಬೀದಿಯತ್ತ ಓಡುವುದೂ ಏಕಕಾಲದಲ್ಲಿ ನಡೆಯಿತು. ಬಂಡಿಯಿಂದ ಹಾರಿ ರೋಷಾವೇಶದಿಂದ ಇಳಿಯಲಿದ್ದ ಬಸಯ್ಯ ದೊರೆಗಳನ್ನು ನೋಡುತ್ತಲೇ ಮಕ್ಕಳೊಂದಿಗೆ ಸರಸರನೆ ಪುನಃ ಬಂಡಿ ಏರಿದ. 'ನನ್ನ ಪಾಲಿಗೆ ಮಗ್ಳು ಸತ್ತು... ಬಂಡಿ ಹೊಡಿರ್ರಲೆ' ಚೀರಿದ. ಬಂಡಿಗಳು ವಿರುದ್ಧ ದಿಕ್ಕಿನತ್ತ ಓಟ ಕಿತ್ತವು. ಇದೆಲ್ಲಾ ಕ್ಷಣದಲ್ಲೇ ಘಟಿಸಿ ಹೋಗಿತ್ತು. 'ಮಹಾಪ್ರಭು, ಇದೀಗ ತಮ್ಮ ಬೆಂಬಲ ಅವರಿಗೆ...' ಎಂದೇನೋ ಹೇಳ ಹೊರಟಿದ್ದ ಪರಶುರಾಮಪ್ಪ. 'ಅವಶ್ಯಕತೆಯಿಲ್ಲ. ಅವರವರ ಸಮಸ್ಯೆಯನ್ನು ಅವರೇ ಬಗೆಹರಿಸಿಕೊಂಡಿದ್ದಾರಲ್ಲಯ್ಯಾ. ತಂದೆ ಪರ ಊರಿನತ್ತ. ಮಗಳು ಪ್ರೀತಿಯ ಕುಟೀರದತ್ತ. ಇದೇ ಪ್ರಜಾಪ್ರಭುತ್ವದ ಲಕ್ಷಣ' ಅಂದ ನಾಯಕರು ಜೋಡಿ ಕುದುರೆಗಳ ಸಾರೋಟು ಏರಿದರು. ಸುತ್ತಾಮುತ್ತಾ ಕೈಮುಗಿದು ನಿಂತಿದ್ದವರಿಗೆಲ್ಲಾ ವಂದಿಸಿ ಪ್ರೀತಿ ಸೂಸಿದರು. ಸಾರೋಟಿನ ಚಕ್ರಗಳು ಉರುಳಿದವು.

## ಬಿ.ಎಲ್. ವೇಣು

ನಾಲ್ಕು ದಶಕಗಳಿಂದ ಕತೆ, ಕಾದಂಬರಿ, ಸಿನಿಮಾ–ಧಾರಾವಾಹಿಗಳ ಕತೆ, ಸಂಭಾಷಣೆಗಳ ಬರವಣಿಗೆಯಲ್ಲಿ ತೊಡಗಿಸಿಕೊಂಡಿರುವ ಲೇಖಕ ಬಿ.ಎಲ್. ವೇಣು. ಏಳು ಐತಿಹಾಸಿಕ ಕಾದಂಬರಿಗಳು ಸೇರಿದಂತೆ 29 ಕಾದಂಬರಿಗಳನ್ನು ಬರೆದಿದ್ದಾರೆ. ಅವರ ಐತಿಹಾಸಿಕ ಕಾದಂಬರಿ 'ಗಂಡುಗಲಿ ಮದಕರಿನಾಯಕ' ಅಪಾರ ಜನಮನ್ನಣೆ ಗಳಿಸಿದೆ. 'ಲೋಕದಲ್ಲಿ ಜನಿಸಿದಾ ಬಳಿಕ...' ಅವರ ಆತ್ಮಕತೆ. ಅವರ ಸುಮಾರು 45 ಕೃತಿಗಳು ಪ್ರಕಟಗೊಂಡಿದ್ದು, 11 ಕೃತಿಗಳು ಸಿನಿಮಾ ಆಗಿವೆ. ಆರೋಗ್ಯ ಇಲಾಖೆಯಲ್ಲಿ ಕಚೇರಿ ಅಧೀಕ್ಷಕರಾಗಿ ನಿವೃತ್ತರು.